ಸಣ್ ಸುದ್ದಿ

ಅನಧೀಕೃತ ಕೋಚಿಂಗ್ ಸೆಂಟರ್ ಮೇಲೆ ಕ್ಷೇತ್ರ ಶಿಕ್ಷಣಾಧಿಕಾರಿ ದಾಳಿ

ಮುದಗಲ್: ಲಿಂಗಸುಗೂರು ತಾಲೂಕಿನಲ್ಲಿ ನವೋದಯ, ಕಿತ್ತೂರ, ಸೇರಿದಂತೆ ನಾನಾ ವಸತಿ ಶಾಲೆಗಳ ತರಬೇತಿಯ ನೆಪದಲ್ಲಿ ಅನಧೀಕೃತ ತರಬೇತಿ ಶಾಲೆಗಳ ಮೇಲೆ ಮಂಗಳವಾರ ಕ್ಷೇತ್ರ ಶಿಕ್ಷಣಾಧಿಕಾರಿ ಹುಂಬಣ್ಣ ರಾಠೋಡ ದಿಢೀರ್ ದಾಳಿ ನಡೆಸಿ, ಎರಡು ದಿನಗಳಲ್ಲಿ ತರಬೇತಿ ಕೇಂದ್ರಗಳನ್ನು ಮುಚ್ಚಬೇಕೆಂದು ಖಡಕ್ ಎಚ್ಚರಿಕೆ ನೀಡಿದರು. ಪಟ್ಟಣದ ಎಪಿಎಂಸಿ ಬಳಿಯಿರುವ ಜ್ಞಾನದೀಪ ಮತ್ತು ಮಸ್ಕಿ ರಸ್ತೆಯ ಆದರ್ಶ ನವೋದಯ ಕೋಚಿಂಗ್ ಕೇಂದ್ರಗಳಿಗೆ ದಾಳಿ ಮಾಡಿ, ಮುಖ್ಯಸ್ಥರಿಂದ ಮುಚ್ಚಳಿಕೆ ಪತ್ರ ಬರೆಯಿಸಿಕೊಂಡಿದ್ದಾರೆ. ಖಾಸಗಿ ಅನುದಾನ ರಹಿತ ಮತ್ತು ಅನುದಾನ ಸಹಿತ ಹಾಗೂ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಪಡೆದಿರುವ ವಿದ್ಯಾರ್ಥಿಗಳಿಗೆ ತರಬೇತಿ ನೀಡುತ್ತಿರುವುದು ಬಯಲಾಗಿದೆ. ಅಲ್ಲದೇ ದಾಖಲಾತಿ ಹೊಂದಿರುವ ಶಾಲೆಗಳಲ್ಲಿ ಕೂಡ ಮಕ್ಕಳಿಗೆ ಹಾಜರಾತಿ ನೀಡುತ್ತಿರುವುದು ಬಯಲಾಗಿದ್ದು, ಶಿಕ್ಷಣ ಇಲಾಖೆಯ ಆಯುಕ್ತರ ನಿರ್ದೇಶನದಂತೆ ಶಾಲೆಗಳ ಹಾಜರಾತಿಯನ್ನು ಪರಿಶೀಲಿಸಿ ಅಂತಹ ಶಾಲೆಗಳ ಮೇಲೂ ಕ್ರಮ ಕೈಕೊಳ್ಳಲಾಗುವುದು ಎಂದು ತಿಳಿಸಿದರು. ಸಿಇಒ ಸಂತೋಷ, ಮುದಗಲ್ ವಲಯದ ಸಿಆರ್‌ಪಿ ರಾಮಚಂದ್ರ ಡವಳೆ ಇದ್ದರು.

ಮೂರು ಕುಟುಂಬಕ್ಕೆ ತಲಾ ₹10 ಲಕ್ಷ ವಿತರಣೆ

ಪರಿಹಾರ ವಿತರಿಸಿದ ಸಚಿವ ಶಂಕರ ಪಾಟೀಲ್ ಮುನೇನಕೊಪ್ಪ | ನೀರು ಪೂರೈಕೆಯಲ್ಲಿ ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ವಿರುದ್ಧ ಕ್ರಮ

• **ಕನ್ನಡಪ್ರಭ ವಾರ್ತೆ** ರಾಯಚೂರು

ಕಲುಷಿತ ನೀರು ಕುಡಿದು ಐವರು ಸಾವನ್ನಪ್ಪಿರುವ ಕುಟುಂಬಸ್ಥರಿಗೆ ಧೈರ್ಯ ಹಾಗೂ ಆರ್ಥಿಕ ನೆರವು ನೀಡಲು ಸರ್ಕಾರದಿಂದ ಈಗಾಗಲೇ ಕ್ರಮವಹಿಸಿದೆ. ಕಲುಷಿತ ನೀರು ಪೂರೈಕೆಗೆ ಕಾರಣವಾದ ಹಾಗೂ ನೀರು ಪೂರೈಕೆಯಲ್ಲಿ ನಿರ್ಲಕ್ಷ್ಯತನ ತೋರಿದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮಕೈಗೊಳ್ಳಲಾಗುವುದು ಎಂದು ಕೈಮಗ್ಗ ಮತ್ತು ಜವಳಿ ಇಲಾಖೆ, ಕಬ್ಬು ಅಭಿವೃದ್ಧಿ, ಸಕ್ಕರೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಶಂಕರ ಪಾಟೀಲ್ ಮುನೇನಕೊಪ್ಪ ಹೇಳಿದರು.

ನಗರಸಭೆಯ ಸಭಾಂಗಣದಲ್ಲಿ ಇತ್ತೀಚೆಗೆ ಕಲುಷಿತ ನೀರು ಸೇವಿಸಿ ಮೃತಪಟ್ಟ 6 ಮಂದಿಯ ಪೈಕಿ ಮೂವರ ಕುಟುಂಬಸ್ಥರಿಗೆ ತಲಾ 10 ಲಕ್ಷ ರು. ಪರಿಹಾರ ಚೆಕ್ ವಿತರಿಸಿ ಮಂಗಳವಾರ ಮಾತನಾಡಿದರು.

ಕಲುಷಿತ ನೀರು ಕುಡಿದು ಕೆಲವರು ಸಾವನಪ್ಪಿದ್ದು, ಇನ್ನೂ ಕೆಲವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಘಟನೆ ಕಹಿ ಘಟನೆಯಾಗಿದ್ದು, ಅತ್ಯಂತ ನೋವಿನ ಸಂಗತಿಯಾಗಿದೆ. ರಾಯಚೂರು ನಗರಸಭೆಯಲ್ಲಿರುವ ಸಮಸ್ಯೆಗಳ ಪರಿಹಾರದ ಕುರಿತು ಜಿಲ್ಲಾಧಿಕಾರಿಗಳ ಮೂಲಕ ವರದಿ ಕಳುಹಿಸಲಿದ್ದು, ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಸೂಕ್ತ ಪರಿಹಾರಕ್ಕೆ ಕ್ರಮವಹಿಸಲಾಗುವುದು. ಅಲ್ಲದೆ ನಗರಸಭೆಯನ್ನು ಮೇಲ್ದರ್ಜೆಗೇರಿಸಲು ಸರ್ಕಾರದೊಂದಿಗೆ ಚರ್ಚಿಸಲಾಗುವುದು ಎಂದು ಹೇಳಿದರು.

ಮುಂದೆ ಈ ತಪ್ಪುಗಳಾಗದಿರಲಿ: ಕುಟುಂಬಸ್ಥರಿಗೆ ರಾಯಚೂರು ನಗರಸಭೆಯ ಎಲ್ಲಾ ಸದಸ್ಯರು ಒಮ್ಮತದಿಂದ ಮೃತಪಟ್ಟ ಕುಟುಂಬಗಳಿಗೆ 10 ಲಕ್ಷ ರು. ಕೊಡಲು ತೀರ್ಮಾನಿಸಿರುವುದು ಹೆಮ್ಮೆಯ ವಿಚಾರವಾಗಿದೆ. ಕಲುಷಿತ ನೀರು ಪೂರೈಕೆಗೆ ಕಾರಣವಾದ ಹಾಗೂ ನೀರು ಪೂರೈಕೆಯಲ್ಲಿ ನಿರ್ಲಕ್ಷ್ಯತನ ತೋರಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಇನ್ನು ಮುಂದೆ ಈ ರೀತಿಯಾದ ತಪ್ಪುಗಳಾಗದಂತೆ ಅತ್ಯಂತ ಜವಬ್ದಾರಿಯುತವಾಗಿ ಸಮಸ್ಯೆಗಳನ್ನು ಪರಿಹರಿಸಲು ಕಾರ್ಯನಿರ್ವಹಿಸಬೇಕು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ರೈತ ಮುಖಂಡರೊಂದಿಗೆ ಚರ್ಚೆ: ನಗರದ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಮುಂಗಾರು ಹಂಗಾಮಿನ ಬಿತ್ತನೆ ಬೀಜಗಳ ಪೂರೈಕೆಯ ಕುರಿತು ರೈತ ಮುಖಂಡರೊಂದಿಗೆ ಚರ್ಚಿಸಿ ಜಿಲ್ಲೆಯಲ್ಲಿ ಪ್ರಸಕ್ತ ಮುಂಗಾರು ಹಂಗಾಮಿಗೆ ರೈತರಿಗೆ ಬೇಕಾಗುವ ಅಗತ್ಯ ಬಿತ್ತನೆ ಬೀಜ ಮತ್ತು ರಸಗೊಬ್ಬರವನ್ನುಸಕಾಲದಲ್ಲಿ ಪೂರೈಸಲು ಎಲ್ಲಸಿದ್ಧತೆ ಮಾಡಿಕೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಇದೇ ಸಂದರ್ಭದಲ್ಲಿ ಸಂಸದ ರಾಜಾ ಅಮರೇಶ್ವರ ನಾಯಕ, ರಾಯಚೂರು ನಗರ ಕ್ಷೇತ್ರದ ಶಾಸಕ ಡಾ. ಶಿವರಾಜ್ ಪಾಟೀಲ್, ನಗರಸಭೆಯ ಅಧ್ಯಕ್ಷೆ ಲಲಿತಾ ಕಡಗೋಳ, ಅಧಿಕಾರಿ, ಸಿಬ್ಬಂದಿ, ಸದಸ್ಯರು ಸೇರಿ ಅನೇಕರು ಇದ್ದರು.



ರಾಯಚೂರಿನ ನಗರಸಭೆಯ ಸಭಾಂಗಣದಲ್ಲಿ ಇತ್ತೀಚೆಗೆ ಕಲುಷಿತ ನೀರು ಸೇವಿಸಿ ಮೃತಪಟ್ಟವರ ಕುಟುಂಬಸ್ಥರಿಗೆ 10 ಲಕ್ಷ ರು. ಪರಿಹಾರ ಚೆಕ್ ವಿತರಿಸಿದರು.

6ಕ್ಕೇರಿದ ಸಾವಿನ ಸಂಖ್ಯೆ

ರಾಯಚೂರು: ಇಲ್ಲಿನ ನಗರಸಭೆಯಿಂದ ಪೂರೈಸಲಾದ ಕಲುಷಿತ ನೀರನ್ನು ಕುಡಿದು ಮತ್ತೊಬ್ಬ ಬಲಿಯಾಗಿರುವ ಘಟನೆ ಸಂಭವಿಸಿದ್ದು, ಇದರಿಂದ ಕಲುಷಿತ ನೀರು ಸೇವಿಸಿ ಮೃತಪಟ್ಟವರ ಸಂಖ್ಯೆ 6ಕ್ಕೆ ಏರಿಕೆಯಾಗಿದೆ. ನಗರದ ಮಂಗಳವಾರಪೇಟೆ ನಿವಾಸಿ ನಯೀಮುದ್ದೀನ್ (55) ಮೃತಪಟ್ಟ ವ್ಯಕ್ತಿ. ವಾಂತಿ, ಭೇದಿಯಿಂದ ಅಸ್ವಸ್ಥಗೊಂಡಿದ್ದ ನಯೀಮುದ್ದೀನ್ ಆರಂಭದಲ್ಲಿ ಖಾಸಗಿ ಆಸ್ಪತ್ರೆಗೆ ಹೋಗಿದ್ದರು. ಬಳಿಕ ಜೂ.7 ರಂದು ರಿಮ್ಸ್ ಬೋಧಕ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದರು.

ನೀರು ಕುಡಿದು ಪರಿಶೀಲಿಸಿದ ಸಚಿವ ಮುನೇನಕೊಪ್ಪ

• **ಕನ್ನಡಪ್ರಭ ವಾರ್ತೆ** ರಾಯಚೂರು

ರಾಂಪುರ ಸಮೀಪದ ಶುದ್ಧೀಕರಣ ಘಟಕಕ್ಕೆ ಉಸ್ತುವಾರಿ ಸಚಿವ ಶಂಕರ ಪಾಟೀಲ್ ಮುನೇನಕೊಪ್ಪ ಭೇಟಿ ನೀಡಿ, ಘಟಕದ ನೀರು ಕುಡಿದು ಮಂಗಳವಾರ ಪರಿಶೀಲನೆ ನಡೆಸಿದರು.

ಕಲುಷಿತ ನೀರು ಪೂರೈಕೆ ಆಗಿರುವ ಹಿನ್ನೆಲೆಯಲ್ಲಿ 6 ಮಂದಿ ಮೃತಪಟ್ಟಿದ್ದು, ನಗರದ ರಾಂಪುರ ಗ್ರಾಮದಲ್ಲಿ ಇರುವ ಕುಡಿಯುವ ನೀರಿನ ಕೆರೆ ಮತ್ತು ಶುದ್ಧಕುಡಿಯುವ ನೀರಿನ ಘಟಕಕ್ಕೆ ಸಚಿವರು ಭೇಟಿ ನೀಡಿ ಪರಿಶೀಲನೆ ಮಾಡಿದರು. ಘಟಕದಲ್ಲಿ ಲೋಪದ ಹಿನ್ನೆಲೆಯಲ್ಲಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಸಂಸದ ರಾಜಾ ಅಮರೇಶ್ವರ ನಾಯಕ, ಶಾಸಕ ಡಾ. ಶಿವರಾಜ್ ಪಾಟೀಲ್, ನಗರಸಭೆ ಅಧ್ಯಕ್ಷೆ ಲಲಿತಾ ಕಡಗೋಲ, ಉಪಾಧ್ಯಕ್ಷೆ ನರಸಮ್ಮ, ಜಿಲ್ಲಾಧಿಕಾರಿ ಚಂದ್ರಶೇಖರ್ ನಾಯಕ, ಜಿಲ್ಲಾಪೋಲಿಸ್ ವರಿಷ್ಠಾಧಿಕಾರಿ ನಿಖಿಲ್, ನಗರಸಭೆ ಪೌರಾಯುಕ್ತ ಗುರುಲಿಂಗಪ್ಪ ಇದ್ದರು.

ರಾಯಚೂರಿನ ರಾಂಪುರ ಸಮೀಪದ ಶುದ್ಧೀಕರಣ ಘಟಕಕ್ಕೆ ಉಸ್ತುವಾರಿ ಸಚಿವ ಮುನೇನಕೊಪ್ಪ ಭೇಟಿ ನೀಡಿ, ಅಲ್ಲಿಯ ನೀರನ್ನು ಕುಡಿದು ಪರಿಶೀಲಿಸಿದರು.

ವಾಸ್ತವಿಕ ಸಂಗತಿಗೆ ಕಿವಿಯಾಗಿ ಕೆಲಸ ಮಾಡಿ: ಉಸ್ತುವಾರಿ ಸಚಿವ ಶಂಕರ ಪಾಟೀಲ್

ಕರ್ನಾಟಕ ಪತ್ರಕರ್ತರ ಸಂಘದ ರಾಯಚೂರು ಜಿಲ್ಲಾ ಸಮಿತಿಯ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಸಲಹೆ

• **ಕನ್ನಡಪ್ರಭ ವಾರ್ತೆ** ರಾಯಚೂರು

ಪತ್ರಕರ್ತರು ಸದಾ ಸತ್ಯದ ಹಾದಿಯಲ್ಲೇ ನಡೆದು ವಾಸ್ತವಿಕ ಸಂಗತಿಗೆ ಕಿವಿಯಾಗಿ, ಮೌಲ್ಯಯುತ, ಮಾನವೀಯತೆಯ ವರದಿ ಮಾಡಿ ನೊಂದವರ ಧ್ವನಿಯಾಗಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಂಕರ ಪಾಟೀಲ್ ಮುನೇನಕೊಪ್ಪ ತಿಳಿಸಿದರು.

ಸ್ಥಳೀಯ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಸಮಿತಿಯ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಸಮಾಜದ ಸಮಸ್ಯೆಗಳಿಗೆ ಮಿಡಿಯುವ ಪತ್ರಕರ್ತರು ಸಮಾಜದ ಆತ್ಮಸಾಕ್ಷಿಯಾಗಿ ನಿಲ್ಲಬೇಕು. ಜನಸಾಮಾನ್ಯರಿಗೆ ಸತ್ಯದ ಸುದ್ದಿಗಳನ್ನು ಬಿತ್ತರಿಸಬೇಕೇ ಹೊರತು ಆತಂಕ, ಭಯವನ್ನುಂಟು ಮಾಡುವ ವರದಿಗಳನ್ನು ಮಾಡಬಾರದು ಎಂದರು.

ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮಾತನಾಡಿ, ಪತ್ರಕರ್ತರು ಅಡೆತಡೆಗಳನ್ನು ಮೆಟ್ಟಿನಿಂತು ನೊಂದವರಿಗೆ ಬೆಳಕಾಗಬೇಕು. ಆಗಮಾತ್ರ ಪತ್ರಿಕೋದ್ಯಮಕ್ಕೆ ಗೌರವ ಸಿಗುವುದೆಂದರು.

ಸಂಸದ ರಾಜಾ ಅಮರೇಶ್ವರ ನಾಯಕ, ಶಾಸಕರಾ ಡಾ.ಶಿವರಾಜ ಪಾಟೀಲ್, ಬಸವನಗೌಡ ದದ್ದಲ್, ಕೆ.ಶಿವನಗೌಡ ನಾಯಕ, ರಾಜಾ ವೆಂಕಟಪ್ಪ ನಾಯಕ, ವೆಂಕಟರಾವ್ ನಾಡಗೌಡ, ಮಾಜಿ ಶಾಸಕ ತಿಪ್ಪರಾಜು ಹವಾಲ್ದಾರ್, ನಗರಸಭೆ ಅಧ್ಯಕ್ಷ ಲಲಿತಾ ಕಡಗೋಳ, ಜಿಲ್ಲಾಧಿಕಾರಿ ಎಲ್ ಚಂದ್ರಶೇಖರ ನಾಯಕ, ಎಸ್ಪಿ ನಿಖಿಲ್.ಬಿ, ಜಿಪಂ ಸಿಇಒ ನೂರ ಜಹಾರ ಖಾನಂ ಸೇರಿ ಸಂಘದ ಪದಾಧಿಕಾರಿಗಳು ಇದ್ದರು.

ಜಿಲ್ಲೆಯಲ್ಲಿ ಉದ್ಯೋಗ ಸೃಷ್ಟಿಗೆ ಕ್ರಮ: ಸಚಿವರ ಭರವಸೆ

ಮಸ್ಕಿ ಪುರಸಭೆ ಕಟ್ಟಡ, ಹೈಟೆಕ್ ಗ್ರಂಥಾಲಯ ಉದ್ಘಾಟಿಸಿದ ಸಚಿವ ಮುನೇನಕೊಪ್ಪ

• **ಕನ್ನಡಪ್ರಭ ವಾರ್ತೆ** ಮಸ್ಕಿ

ರಾಯಚೂರು ಜಿಲ್ಲೆಗೆ ಜವಳಿ ಪಾರ್ಕ್ ನೀಡುವ ಮೂಲಕ 25 ಸಾವಿರ ಉದ್ಯೋಗ ಸೃಷ್ಟಿಗೆ ಕ್ರಮಕೈಗೊಳ್ಳುತ್ತೇನೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಂಕರ ಪಾಟೀಲ್ ಮುನೇನಕೊಪ್ಪ ಭರವಸೆ ನೀಡಿದರು.

ಪಟ್ಟಣದಲ್ಲಿ ನಿರ್ಮಿಸಲಾದ ಪುರಸಭೆಯ ನೂತನ ಕಟ್ಟಡ ಹಾಗೂ ಹೈಟೆಕ್ ಗ್ರಂಥಾಲಯ ಉದ್ಘಾಟಿಸಿ ಹಾಗೂ ಅರ್ಹ ಫಲಾನುಭವಿಗಳಿಗೆ ಹಕ್ಕು ಪತ್ರಗಳನ್ನು ವಿತರಿಸಿ ಮಾತನಾಡಿದ ಸಚಿವರು, ಕೇಂದ್ರ ಹಾಗೂ ಸರ್ಕಾರದ ಯೋಜನೆಗಳು ಕಟ್ಟಕಡೆಯ ವ್ಯಕ್ತಿಗೆ ತಲುಪಿಸುವ ಕೆಲಸ ಚುನಾಯಿತ ಪ್ರತಿನಿಧಿಗಳು ಮಾಡಬೇಕು ಎಂದರು.

ಜಿಲ್ಲೆಯಲ್ಲಿ ಬೀಜ ಗೊಬ್ಬರದ ಕೊರತೆಯಾದರೆ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಕ್ಷೇತ್ರದ ನೀರಾವರಿ ಯೋಜನೆಗಳ ಸಮಸ್ಯೆಗಳನ್ನು ಪ್ರಾಮಾಣಿಕವಾಗಿ ಬಗೆ ಹರಿಸುವ ಪ್ರಯತ್ನ ಮಾಡುತ್ತೇನೆ. ಮಸ್ಕಿಯಲ್ಲಿ ಹೈಟೆಕ್ ಗ್ರಂಥಾಲಯ ಉದ್ಘಾಟನೆಯಾಗಿದ್ದು, ಪ್ರತಿಯೊಬ್ಬರೂ ಇದರ ಸದುಪಯೋಗ ಪಡೆಯಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕೊಪ್ಪಳ ಸಂಸದ ಕರಡಿ ಸಂಗಣ್ಣ, ರಾಯಚೂರು ಸಂಸದ ರಾಜಾ ಅಮರೇಶ್ವರ ನಾಯಕ, ಮಸ್ಕಿ ಶಾಸಕ ಆರ್.ಬಸನಗೌಡ, ಮಾಜಿ ಶಾಸಕ ಪ್ರತಾಪಗೌಡ ಪಾಟೀಲ್, ಜಿಲ್ಲಾಧಿಕಾರಿ ಚಂದ್ರಶೇಖರ ನಾಯಕ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ನಿಖಿಲ್.ಬಿ ಸೇರಿ ಅಧಿಕಾರಿ, ಸಿಬ್ಬಂದಿ, ಮುಖಂಡರು ಇದ್ದರು.

ಸರ್ಕಾರದಿಂದಲೇ ಸಾಂಸ್ಕೃತಿಕ ಹಬ್ಬ ಆಚರಣೆಗೆ ಪ್ರಯತ್ನ

ಎರಡು ಟನ್ ಭಾರವಾದ ಕಲ್ಲು ಎಳೆಯುವ ಸ್ಪರ್ಧೆಗೆ ಚಾಲನೆ ನೀಡಿದ ಸಚಿವ ಶಂಕರ ಪಾಟೀಲ್ ಮುನೇನಕೊಪ್ಪ

• **ಕನ್ನಡಪ್ರಭ ವಾರ್ತೆ**
ರಾಯಚೂರು

ಸರ್ಕಾರದಿಂದಲೇ ಮುಂಗಾರು ಸಾಂಸ್ಕೃತಿಕ ಹಬ್ಬ ಆಚರಣೆ ಮಾಡುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುವುದು ಎಂದು ಉಸ್ತುವಾರಿ ಸಚಿವ ಶಂಕರ ಪಾಟೀಲ್ ಮುನೇನಕೊಪ್ಪ ಭರವಸೆ ನೀಡಿದರು.

ನಗರದ ಎಪಿಎಂಸಿಯ ರಾಜೇಂದ್ರ ಗಂಜ್‌ನಲ್ಲಿ ಜಿಲ್ಲಾ ಮುನ್ನೂರುಕಾಪು (ಬಲಿಜ) ಸಮಾಜದಿಂದ ಮೂರು ದಿನಗಳ ಕಾಲ ಹಮ್ಮಿಕೊಂಡಿರುವ ಮುಂಗಾರು ಸಾಂಸ್ಕೃತಿಕ ಹಬ್ಬದ ಎರಡನೇ ದಿನ ಜೋಡೆತ್ತುಗಳಿಂದ ಎರಡು ಟನ್ ಭಾರವಾದ ಕಲ್ಲು ಎಳೆಯುವ ಸ್ಪರ್ಧೆಗೆ ಚಾಲನೆ ನೀಡಿ ಮಂಗಳವಾರ ಮಾತನಾಡಿದರು.

ಸರ್ಕಾರದ ಯಾವುದೇ ರೀತಿಯ ಅನುದಾನವಿಲ್ಲದೆ ಮುನ್ನೂರು ಕಾಪು ಸಮಾಜವುಕಳೆದಎರಡುದಶಕಗಳಿಂದ ಹಬ್ಬ ಆಚರಿಸುತ್ತಿರುವುದು ಶ್ಲಾಘನೀಯ. ಮುಂದಿನ ದಿನಗಳಲ್ಲಿ ಸರ್ಕಾರದಿಂದಲೇ ಸಾಂಸ್ಕೃತಿಕ ಹಬ್ಬ ಆಚರಿಸುವ ನಿಟ್ಟನಲ್ಲಿ ಸಂಬಂಧಿಸಿದ ಸಚಿವರೊಂದಿಗೆ ಚರ್ಚಿಸಿ ಸೂಕ್ತ ತೀರ್ಮಾನಕ್ಕೆ ಬರಲಾಗುವುದು ಎಂದರು.

ಹಬ್ಬದ ರೂವಾರಿ ಹಾಗೂ ಮಾಜಿ ಶಾಸಕ ಎ.ಪಾಪಾರೆಡ್ಡಿ ಮಾತನಾಡಿ, ಮುನ್ನೂರು ಕಾಪು ಸಮಾಜವು ಯಾರ ಸಹಾಯ, ಸಹಕಾರವಿಲ್ಲದೇ ಕಳೆದ 20 ವರ್ಷಗಳಿಂದ ಸತತವಾಗಿ ಮುಂಗಾರು ಸಂಸ್ಕೃತಿಕ ಹಬ್ಬವನ್ನು ಆಯೋಜಿಸುತ್ತಾ ಬರುತ್ತಿದೆ. ಈ ಹಿಂದೆ ಕಾರ್ಯಕ್ರಮಕ್ಕೆ ಕೇವಲ 5 ಲಕ್ಷ ಖರ್ಚು ಆಗುತ್ತಿತ್ತು. ಆದರೆ ಇಂದು 50 ರಿಂದ 60 ಲಕ್ಷ ರು. ವೆಚ್ಚವಾಗುತ್ತಿದೆ ಎಂದರು.

ಕಾಶಿ ಪೀಠದ ಡಾ.ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಶ್ರೀ, ಶಾಸಕ ಡಾ.ಶಿವರಾಜ ಪಾಟೀಲ್, ಮಟಮಾರಿ ಎಲೆ ಬಿಚ್ಚಾಲಿಯ ವೀರಭದ್ರ ಶಿವಾಚಾರ್ಯ ಸ್ವಾಮಿ, ಗಬ್ಬೂರಿನ ಬೂದಿ ಬಸವ ಶಿವಾಚಾರ್ಯ ಸ್ವಾಮಿ, ಸಂಸದ ರಾಜಾ ಅಮರೇಶ್ವರ ನಾಯಕ, ಮಾನ್ವಿ ಶಾಸಕ ರಾಜಾ ವೆಂಕಟಪ್ಪ ನಾಯಕ, ನಗರಸಭೆ ಅಧ್ಯಕ್ಷ ಲಲಿತಾ ಕಡಗೋಳ, ಬಿಜೆಪಿ ಪಕ್ಷದ ಜಿಲ್ಲಾಧ್ಯಕ್ಷ ರಮಾನಂದ ಯಾದವ್, ಎಐಸಿಸಿ ಕಾರ್ಯದರ್ಶಿ ಬೋಸರಾಜು, ಮುನ್ನೂರು ಕಾಪು ಸಮಾಜದ ಅಧ್ಯಕ್ಷ ಬೇಲ್ಲಂ ನರಸರೆಡ್ಡಿ, ಬಸವರಾಜ ರೆಡ್ಡಿ ಉಪಸ್ಥಿತರಿದ್ದರು.

CITATION

IN THE COURT OF THE HON'BLE CIVIL JUDGE SENIOR DIVISION AT SINDHANUR SITTING AT MANVI.

O.S.No.66/2016

H.Sharanappa Gouda
//Vs//
Lingabassappa

Petitioner/Plaintiff : H.Sharanappa Gouda S/o Mahadevappa, Age:48 years, Occ: Agrl, R/o Madlapur village , Tq: Manvi

//Vs//

Respondent/Defendant : Lingabassappa S/o Thimmanagouda, since dead by LRs

1-a). Smt.Lakshmi W/o Late. Lingabassappa, Age:48 years, Occ: Household affairs R/o Madlapur, now residing at Jayanagara, Manvi. 1-b). Thimmanangouda S/o Late.Lingabassappa, Age:35 years, Occ: Agriculture, R/o Madlapur, now residing at Jayanagara, Manvi. 1-c). Shashiokumar S/o Late.Lingabassappa, Age:30 years, Occ: Agriculture, R/o Madlapur, now residing at Jayanagara, Manvi. 1-d). Pushpa D/o Late. Lingabassappa, Age:25 years, Occ: Household affairs, R/o Madlapur, now residing at Jayanagara, Manvi. 1-e) Pinkamma D/o Late. Lingabassappa, Age:20 years, Occ:Student, R/o Madlapur, now residing at Jayanagara, Manvi.

Claim : Suit for specific performance of contract

Whereas in the above case the Plaintiff has filed te suit for specific performance of contract against you.

If you are having any right or interest or any claim or defense in the above matter you are hereby called upon to be present before this Court in person or through Advocate on 30-07-2022 at 11-00 A.M, before this Court to answer all the questions and produce all the documents in support of your defense.

Otherwise the matter will be heard and decided in your absence as per law. Given under my hand and seal of the Court on this 13-06-2022.

// By order of the Court //
Sd/- (VENKOBA)
Chief Ministerial Officer,
Civil Judge & JMFC, Court,
Manvi

Through,
Sd/- Mallikarjun,
Advocate for Plaintiff.

CITATION

IN THE COURT OF THE HON'BLE CIVIL JUDGE AT MANVI.

Criminal Misc. No.: 1262/2021

Tramma and others
V/S
The Thasildar Manvi and all concerned
Claim: Death Certificate.

WHEREAS, in the above case the petitioner has filed petition U/Sec. 10(3) R/w Sec. 13(3) of Karnataka Birth and Death Act 1969 on the file of this court at Manvi claiming the Death Certificate of that the petitioner husband by name Iranna @ Iranna Kumbar S/o Sabanna, R/o Ballatagi Village, was died on 23-05-2020.

All the concerned interested in the matter are hereby warn to appear on or before the 23rd day of July, 2022 at 11:00 a.m. and produced all the documents support of your claim.

Take notice that in default of your appearance from the day mentioned about the case will herd and determined in your absence.

Given under my hand and seal of the Court this 14th June, 2022 at Manvi.

// By order of the Court //
Sd/- Chief Ministerial Officer,
Civil Judge and JMFC Court,
Manvi.

Place : Manvi
Through
Sd/- H. N. Advocate, Manvi.

ಕರ್ನಾಟಕ ಸರ್ಕಾರ
ಪಟ್ಟಣ-ಪಂಚಾಯತ್ ಕಾರ್ಯಾಲಯ ತುರ್ವಿಹಾಳ-584132
ಕ.ಸ./ಪ.ಪ.ತು/ಪ್ರಕಟಣೆ/2022-23 ದಿನಾಂಕ: 14.06.2022

ಪ್ರಕಟಣೆ

ಈ ಮೂಲಕ ತುರ್ವಿಹಾಳ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿರುವ ಶಾಲೆಗಳಲ್ಲಿ ಬಿಸಿ ಊಟದ ಮುಖ್ಯ ಅಡಿಗೆದಾರ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತಿದೆ.

ಕ್ರ ಸಂ	ಶಾಲೆಯ ಹೆಸರು	ಬಿಸಿ ಊಟದ ಮುಖ್ಯ ಅಡಿಗೆದಾರ ಖಾಲಿ ಇರುವ ಹುದ್ದೆಗಳ ಸಂಖ್ಯೆ	ಮೀಸಲಾತಿ
1	ಸರಕಾರಿ ತೆರಿಯ ಪ್ರಾಥಮಿಕ ಶಾಲೆ ಹೊಸುರು ವಾರ್ಡ ನಂ 11	1	ಪ.ಜಾ - 1
2	ಸರಕಾರಿ ಪ್ರೌ